Grant of Darkhast Land in Hassan Taluk

108 SRI B. H. LAKSHMANAIAH (Belur).—

SRI K. B. MALLAPPA(Arakalagud).—Will the Minister for Revenue and Agriculture be pleased to state.—

(*a*) what is the extent of land available for disposal in each taluk of the Hassan District through Darkhast ;

(*b*) how many acres of land was disposed off through Darkhast in each taluk for the last 3 years (year-wise figures) and the type of land ;

(*c*) how many landless persons, small farmers and marginal farmers identified in each taluk of Hassan District ; out of them the number of such category of people who have been granted lands and the total extent of land granted to them for the last 3 years (year-wise) ;

(*d*) how many SC & ST people have applied for the grant of land in each taluk of Hassan District and how many of them have been granted land and what is the extent of land granted to them for the last 3 years (year-wise) ?

SRI S. BANGARAPPA (Minister for Revenue and Agriculture).—

(*a*) Statement (A) laid on the table. *

(*b*) Statements (B) & (C) laid on the table.

(*c*) Statement (D) & (F) laid on the table.

(*d*) Statement (E) laid on the table.

Proposed strike by Kerosene Venders in Bangalore

ಶ್ರೀ ಎ. ಲಕ್ಷ್ಮೀಸಾಗರ್ (ಚಿಕ್ಕಪೇಟ್).—ಮಾನ್ಯ ಅಧ್ಯಕ್ಷರೇ, ಇವತ್ತಿನಿಂದ ಬೆಂಗಳೂರು ನಗರದಲ್ಲಿ ಸೀಮೆ ಎಣ್ಣೆ ಮಾರತಕ್ಕವರು ಸಂಪೂ ಹೊಡುತ್ತಾರೆಂದು ತಿಳಿದುಬಂದಿದೆ. ಗಾಡಿಗಳಲ್ಲಿ ತಂದರೆ ಚಿಲ್ಲರೆ ಸೀಮೆ ಎಣ್ಣೆ ಮಾರಾಟ ಮಾಡುವವರು ನಗರದಲ್ಲಿ ೧,೫೦೦ ಮಂದಿ ಇದ್ದಾರೆ. ಅವರು ಹೇಳಿದರು ; ನಾವು ನಮ್ಮ ಕುಂದುಕೊರತೆಗಳನ್ನು ಸರ್ಕಾರದ ಮುಂದಿಟ್ಟಿದ್ದೇವೆ, ಆದರೆ ಈ ಲಾಗಾಯ್ತು ನಮ್ಮ ಕುಂದುಕೊರತೆಗಳನ್ನು ಸರ್ಕಾರ ನಿವಾರಿಸಲಿಲ್ಲ : ಇದುವರೆಗೆ ನಾವು ಕಾಯ್ದು ಕಾಯ್ದು ಸಾಕಾಗಿ ಇವತ್ತಿನಿಂದ ಸಂಪೂ ಹೊಡಬೇಕೆಂದು ನಿರ್ಧರಿಸಿದ್ದೇವೆಂದು ಹೇಳಿದ್ದಾರೆ. ಈ ಹಿಂದೆ ನಾನು ಸೀಮೆ ಎಣ್ಣೆ ವಿತರಣೆಯಲ್ಲಿ ತೊಂದರೆಯಾಗಿದೆ ಎಂದು ಸಭೆಯ ಗಮನಕ್ಕೆ ತಂದಿದ್ದೇನೆ ; ಆದರೂ ಕೂಡ ಇದುವರೆಗೆ ಪರಿಸ್ಥಿತಿ ಸುಧಾರಣೆಯಾಗಲಿಲ್ಲ. ಚಿಲ್ಲರೆ ಮಾರಾಟ ಮಾಡತಕ್ಕ ಸೀಮೆ ಎಣ್ಣೆ ಹೂರಾಟಗಾರರು ಎಣ್ಣೆ ಮಾರುವುದನ್ನು ನಿಲ್ಲಿಸಿದರೆ ಸೀಮೆ ಎಣ್ಣೆ ಸಿಗದೆ ಕಟ್ಟಿಗೆ ಬೆಲೆ ಕೂಡ ದುಬಾರಿಯಾಗಿರುವ ಈ ಸಂದರ್ಭದಲ್ಲಿ ಪರಿಸ್ಥಿತಿಯನ್ನು ನಿವಾರಿಸುವುದಕ್ಕೆ ಸರ್ಕಾರದವರು ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೆ ? ಅಥವಾ ಕ್ರಮ ತೆಗೆದುಕೊಳ್ಳುತ್ತಾರೆಯೆ ?

---

* Copy placed in the Karnataka Legislature Library *Vide* No. 4, dated 3-3-1980.

ಶ್ರೀ ಎಸ್. ಬಂಗಾರಪ್ಪ.—ಸನ್ಮಾನ್ಯ ಅಧ್ಯಕ್ಷರೆ, ನಾವು ಈಗಾಗಲೇ ಈ ಹಂಚಿಕೆ ವಿಚಾರದ ಬಗ್ಗೆ ಈ ಸದನಕ್ಕೆ ತಿಳಿಸಿದ್ದೇವೆ. ಈಗ ಹಂಚಿಕೆಯ ಬಗ್ಗೆ ಮತ್ತೆ ಯಾವ ರೀತಿ ತೊಂದರೆಗಳು ಬಂದಿವೆ ಅದರ ವಿವರವನ್ನು ಮಾನ್ಯ ಸದಸ್ಯರು ಕಳುಹಿಸಿಕೊಟ್ಟರೆ ನಾನು ಉತ್ತರ ತಿಳಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ನಾನು ಪತ್ರಿಕೆಯಲ್ಲಿ ಬಂದಿರತಕ್ಕ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಕೈಗಾಡಿಯಲ್ಲಿ ಸೀಮೆ ಎಣ್ಣೆ ಮಾರತಕ್ಕವರು ೯೦೦ ಜನ ಚಿಲ್ಲರೆ ಸೀಮೆ ಎಣ್ಣೆ ವ್ಯಾಪಾರ ಮಾಡತಕ್ಕವರು ೫೦೦ ಜನ ಒಟ್ಟು ೧,೪೦೦ ಜನ ತಮ್ಮ ಕುಂದುಕೊರತೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದರು ಅವುಗಳನ್ನು ಈಡೇರಿಸಲಿಲ್ಲ ಅಂತ ಇವ್ಹೊತ್ತಿನಿಂದ ಸಂಪು ಹೂಡುತ್ತಾರೆಂದು ಪತ್ರಿಕೆಯಲ್ಲಿ ವರದಿಯಾಗಿದೆ. ಆದುದರಿಂದ ಇದರ ಬಗೆ ಯಾವ ತೊಂದರೆಯೂ ಆಗದಂತೆ ಗ್ರಾಹಕರಿಗೆ ಸೀಮೆ ಎಣ್ಣೆ ಸರಬರಾಜು ಮಾಡುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ. ಇವರು ಏನಾದರೂ ಸಂಪು ಹೂಡಿದರೆ ಗ್ರಾಹಕರಿಗೆ ಗತಿ ಏನು ? ಅವರು ಅಡಿಗೆ ಯಾವ ರೀತಿ ಮಾಡಬೇಕು, ದೀಪ ಯಾವ ರೀತಿ ಹಚ್ಚಬೇಕು.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಮಾನ್ಯ ಸದಸ್ಯರು ಸೀಮೆ ಎಣ್ಣೆ ಗಾಡಿಯನ್ನು ಎಳೆದುಕೊಂಡು ಹೋಗಿ ಮಾರುವವರ ವಿಚಾರ ಹೇಳುತ್ತಿದ್ದಾರೆ. ಈಗ ಸೀಮೆ ಎಣ್ಣೆ ಎಷ್ಟು ಬೇಕಾಗುತ್ತದೆ, ಈಗ ನಾವು ಎಷ್ಟು ಪಡೆಯುತ್ತಿದ್ದೇವೆ ಆ ವಿಷಯವನ್ನು ಮಾನ್ಯ ಸದಸ್ಯರು ಕೇಳುತ್ತಾ ಇಲ್ಲ. ಕೈಗಾಡಿಯಲ್ಲಿ ತೆಗೆದುಕೊಂಡು ಹೋಗಿ ಮನೆ ಮನೆಗೆ ಹಂಚತಕ್ಕವರ ವಿಷಯವನ್ನು ಕೇಳುತ್ತಿದ್ದಾರೆ. ಅಧ್ಯಕ್ಷರೆ. ಈಗ ಅವರ ಡಿಮ್ಯಾಂಡ್ ಏನೆಂದು ತಿಳಿಸಿದ್ದಾರೆ. ಅದನ್ನು ಆಕ್ಟಿವ್ ಆಗಿ ಕಂಸಿಡರ್ ಮಾಡುತ್ತಿದ್ದೇವೆ. ಕೈಗಾಡಿಯವರಿಗೆ ತೊಂದರೆಯಾಗಿದೆ ಅನ್ನುವುದು, ಮತ್ತು ಅನೇಕ ಕುಟುಂಬದವರಿಗೆ ತೊಂದರೆಯಾಗಿರತಕ್ಕ ವಿಷಯ ಸರ್ಕಾರಕ್ಕೆ ಬಂದಿದೆ, ಆದರ ಬಗ್ಗೆ ಅತಿ ಶೀಘ್ರವಾಗಿ ತೀರ್ಮಾನ ಮಾಡುತ್ತೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಮಂತ್ರಿಗಳಿಂದ ಸಮರ್ಪಕವಾದಂತಹ ಉತ್ತರ ಬರಲಿಲ್ಲ. ಇವ್ಹೊತ್ತು ಅವರು ಸಂಪು ಹೂಡುತ್ತೇವೆಂದು ಹೇಳಿದ್ದಾರೆ. ಆದುದರಿಂದ ಈ ಪರಿಸ್ಥಿತಿಯನ್ನು ಸರಿಪಡಿಸುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಅವರು ಕೊಟ್ಟಿರತಕ್ಕ ಡಿಮ್ಯಾಂಡ್ಸ್ ಸರ್ಕಾರದಲ್ಲಿ ಇದೆ. ಅವರು ಸಂಪು ಹೂಡಿಬಿಡುತ್ತೇವೆಂದು ಹೇಳುವುದಾದರೆ ಅದು ಬಹಳ ಕಷ್ಟ. ಆದರ ಬಗ್ಗೆ ಯಾವ ರೀತಿ ಸರಿಪಡಿಸಬೇಕು. ಕ್ರಮ ತೆಗೆದುಕೊಳ್ಳುತ್ತೇವೆ. ಸಂಪು ಹೂಡುತ್ತಾರೆ ಅನ್ನುವ ದೃಷ್ಟಿಯಿಂದ ಒಂದು ಕಾರ್ಯಕ್ರಮ ಹಾಕಿಕೊಳ್ಳುವುದು ಬಹಳ ಕಷ್ಟ. ಅದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಸೀಮೆ ಎಣ್ಣೆಯನ್ನು ಗ್ರಾಹಕರಿಗೆ ಸರಬರಾಜು ಮಾಡಲಿಕ್ಕೆ ಏನು ವ್ಯವಸ್ಥೆ ಮಾಡುತ್ತೀರಾ ? ನಾನು ಅದರ ಬಗ್ಗೆ ಹೆಚ್ಚು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಅವರು ಸಂಪು ಹೂಡಿದರೆ, ಸೀಮೆ ಎಣ್ಣೆಯನ್ನು ಗ್ರಾಹಕರಿಗೆ ಸರಬರಾಜು ಮಾಡುವುದಕ್ಕೆ ಅಲಾಯಿದ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಈ ವಿವರಣೆಯ ಬಗ್ಗೆ ನಾನು ಇಲಾಖೆಯವರ ಜೊತೆ ಮಾತನಾಡಿ ತಿಳಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ಇದೇ ದಿವಸ ಸಭೆ ಮುಗಿಯುವುದರೊಳಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ಏಕೆಂದರೆ ಇದು ಬಹಳ ಜರೂರಾದಂತಹ ವಿಚಾರ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಮಾನ್ಯ ಸದಸ್ಯರು, ಇದು ಬಹಳ ಜರೂರಾದಂತಹ ವಿಚಾರ ಅಂತ ಹೇಳಿದ್ದಾರೆ. ಆದುದರಿಂದ ನಾಳೆ ಅದರ ಬಗ್ಗೆ ವಿವರಣೆ ಕೊಡುತ್ತೇನೆ.